ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡಾವಳಿಗಳು

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ದ್ವಿತೀಯ ದರ್ಜೆ ಬೆರಳಚ್ಚುಗಾರರ 11 ಖಾಲಿ ಹುದ್ದೆಗಳನ್ನು ಹಿರಿಯ ಬೆರಳಚ್ಚುಗಾರರ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ:66:ಎಫ್‌ಡಿ:ಎಸ್‌ಆರ್‌ಪಿ:81:, ದಿ.17.12.1981.
2. ಸರ್ಕಾರದ ಆದೇಶ ಸಂಖ್ಯೆ:ಇಡಿ:118:ಯುಇಸಿ:2015, ದಿ:16.12.2015.

****

<u>ಪ್ರಸ್ತಾವನೆ</u>

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಮಂಜೂರಾದ ಒಟ್ಟು 454 ಬೆರಳಚ್ಚುಗಾರರ ಹುದ್ದೆಯಲ್ಲಿ ಪ್ರಸ್ತುತ ಈಗಾಗಲೇ 80 ಹಿರಿಯ ಬೆರಳಚ್ಚುಗಾರರ ಮಂಜೂರಾದ ಹುದ್ದೆ ಇದ್ದು, ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಶೇಕಡ 20 ರಂತೆ ಹಿರಿಯ ಬೆರಳಚ್ಚುಗಾರರ ಹುದ್ದೆಗೆ ಮೇಲ್ದರ್ಜೆಗೇರಿಸಲು ಅವಕಾಶವಿರುವುದರಿಂದ ಈಗಾಗಲೇ 80 ಬೆರಳಚ್ಚುಗಾರರ ಹುದ್ದೆಗಳನ್ನು ಹಿರಿಯ ಬೆರಳಚ್ಚುಗಾರರ ಹುದ್ದೆಗೆ ಉನ್ನತೀಕರಿಸಿರುವುದನ್ನು ಒಳಗೊಂಡು ಇನ್ನುಳಿದ 11 ಬೆರಳಚ್ಚುಗಾರರ ಖಾಲಿ ಹುದ್ದೆಗಳನ್ನು ಹಿರಿಯ ಬೆರಳಚ್ಚುಗಾರರ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಲು ಹಾಗೂ ಈ ಬಗ್ಗೆ ಬಡ್ತಿ ನೀಡಿದ ನಂತರ ಉಂಟಾಗುವ ವೇತನಕ್ಕೆ ಇಲಾಖೆಯ ಒಟ್ಟಾರೆ ಉಳಿತಾಯದಲ್ಲಿ ಮರುಹೊಂದಾಣಿಕೆ ಮೂಲಕ ಭರಿಸಿಕೊಳ್ಳುವ ಷರತ್ತಿಗೊಳಪಡಿಸಿ ಉಲ್ಲೇಖ(2)ರ ಆದೇಶದಲ್ಲಿ ಸರ್ಕಾರದ ಅನುಮತಿ ನೀಡಲಾಗಿರುತ್ತದೆ.

ಸರ್ಕಾರದ ಆದೇಶದನುಸಾರ ಕಾಲೇಜು ಶಿಕ್ಷಣ ಇಲಾಖೆಯ ಕಛೇರಿ/ಕಾಲೇಜುಗಳಲ್ಲಿ ಖಾಲಿ ಇರುವ 11 ಬೆರಳಚ್ಚುಗಾರರ ಹುದ್ದೆಗಳನ್ನು ಶೇ 85ರಂತೆ ಉಳಿಕೆ ಮೂಲ ವೃಂದಕ್ಕೆ 09 ದ್ವಿತೀಯ ದರ್ಜೆ ಬೆರಳಚ್ಚುಗಾರರ ಹುದ್ದೆಗಳನ್ನು ಹಾಗೂ ಶೇ. 15ರಂತೆ ಕಲ್ಯಾಣ ಕರ್ನಾಟಕ ಸ್ಥಳೀಯ ಮೂಲ ವೃಂದಕ್ಕೆ 02 ದ್ವಿತೀಯ ದರ್ಜೆ ಬೆರಳಚ್ಚುಗಾರರ ಹುದ್ದೆಗಳನ್ನು ಹಿರಿಯ ಬೆರಳಚ್ಚುಗಾರರ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಲು ಈ ಆದೇಶ.

**<u>ಆದೇಶ ಸಂಖ್ಯೆ:ಡಿಸಿಇ:ಟಿಆರ್‌ಎನ್:ಸಿ.ಪಿ:2:2022 ಟಿಡಿಜಿ ಬೆಂಗಳೂರು ದಿನಾಂಕ:15.11.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸರ್ಕಾರದ ದಿನಾಂಕ:16.12.2015ರ ಸಂಖ್ಯೆ: ಇಡಿ 118 ಯುಇಸಿ 2015 ರಲ್ಲಿ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಮಂಜೂರಾದ ಒಟ್ಟು 454 ಬೆರಳಚ್ಚುಗಾರರ ಹುದ್ದೆಯಲ್ಲಿ ಸರ್ಕಾರದ ದಿ.17.12.1981 ರ ಆದೇಶದನುಸಾರ ಶೇಕಡ 20 ರಂತೆ ಹಿರಿಯ ಬೆರಳಚ್ಚುಗಾರರ ಹುದ್ದೆಗೆ ಮೇಲ್ದರ್ಜೆಗೇರಿಸಲು ಅವಕಾಶವಿರುವುದರಿಂದ ಈಗಾಗಲೇ 80 ಹಿರಿಯ ಬೆರಳಚ್ಚುಗಾರರ ಹುದ್ದೆ ಇದ್ದು

-2-

ಇನ್ನುಳಿದ 11 ದ್ವಿತೀಯ ದರ್ಜೆ ಬೆರಳಚ್ಚುಗಾರರ ಖಾಲಿ ಹುದ್ದೆಗಳನ್ನು ಕೆಳಕಂಡ ಕಾಲಂ 02 ರ ಕಾಲೇಜುಗಳಿಂದ 01 ದ್ವಿತೀಯ ದರ್ಜೆ ಬೆರಳಚ್ಚುಗಾರರ ಹುದ್ದೆಯನ್ನು ಕಾಲಂ 03ರ ಕಾಲೇಜುಗಳಿಗೆ ಹಿರಿಯ ಬೆರಳಚ್ಚುಗಾರರ ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸಿ ಸ್ಥಳಾಂತರಿಸಿ ಆದೇಶಿಸಲಾಗಿದೆ.

| ಕ್ರ. ಸಂ | ದ್ವಿತೀಯ ದರ್ಜೆ ಬೆರಳಚ್ಚುಗಾರರ ಹುದ್ದೆ ಖಾಲಿ ಇರುವ ಕಾಲೇಜು | ಹಿರಿಯ ಬೆಳಚ್ಚುಗಾರರಾಗಿ ಮೇಲ್ದರ್ಜೆಗೇರಿಸಿ ಸ್ಥಳಾಂತರಿಸಿದ ಕಾಲೇಜು |
|---|---|---|
| 1 | 2 | 3 |
| 1 | ಸಪ್ರದಕಾ, ಬೆಳ್ಳಾವಿ | ಸಪ್ರದಕಾ, ಕೊರಟಗೆರೆ |
| 2 | ಸಪ್ರದಕಾ, ಹಾರೋಗೇರಿ, ರಾಯಬಾಗ (ತಾ) | ಸಪ್ರದಕಾ, ತಿಳುವಳ್ಳಿ, ಹಾನಗಲ್ (ತಾ) |
| 3 | ಸಪ್ರದಕಾ, ನಿಪ್ಪಾಣಿ, ಬೆಳಗಾಂ (ಜಿ) | ಸಪ್ರದಕಾ, ಸುಳ್ಯ, ದಕ್ಷಿಣ ಕನ್ನಡ (ಜಿ) |
| 4 | ಸಪ್ರದಕಾ, ಜವನಗೊಂಡನಹಳ್ಳಿ | ಸಮಕಾ, ಗಂಧದಕೋಟೆ, ಹಾಸನ (ಜಿ) |
| 5 | ಸಪ್ರದಕಾ, ನಾಪೋಕ್ಲು | ಸಪ್ರದಕಾ, ಕುದೇರು, ಚಾಮರಾಜನಗರ (ಜಿ) |
| 6 | ಸಪ್ರದಕಾ, ಕ್ಯಾತನಹಳ್ಳಿ , ಮಂಡ್ಯ (ಜಿ) | ಸಗ್ರವಿಕಾ, ಹೊಳೆನರಸೀಪುರ |
| 7 | ಸಪ್ರದಕಾ, ದಂಡಿನಶಿವರ | ಸಪ್ರದಕಾ, ಹನಗೋಡು, ಹುಣಸೂರು (ತಾ) |
| 8 | ಸಮಕಾ, ಕಾರವಾರ | ಸಪ್ರದಕಾ, ಜೋಯಿಡಾ |
| 9 | ಸಪ್ರದಕಾ, ಸಿ.ಎಸ್.ಪುರ, ಗುಬ್ಬಿ (ತಾ) | ಸಪ್ರದಕಾ, ಮೇಲುಕೋಟೆ, ಪಾಂಡವಪುರ(ತಾ) |
| ಕಲ್ಯಾಣ ಕರ್ನಾಟಕ | | |
| 10 | ಸಪ್ರದಕಾ, ತುರುವಿಹಾಳ, ಸಿಂಧನೂರು(ತಾ) | ಸಪ್ರದಕಾ, ಕೂಡ್ಲಿಗಿ, |
| 11 | ಸಪ್ರದಕಾ, ಹೊಸಬಂಡಿ ಹರ್ಲಾಪುರ, ಕೊಪ್ಪಳ (ಜಿ) | ಸಪ್ರದಕಾ, ಅಳವಂಡಿ, ಕೊಪ್ಪಳ (ಜಿ) |

**(ಕರಡು ಇ ಆಫೀಸ್‌ನಲ್ಲಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

15/11/2022

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ

1. ಮೇಲ್ಕಂಡ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
3. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

ಪ್ರತಿಯನ್ನು

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು –ಮಾಹಿತಿಗಾಗಿ.
2. ಕೇಂದ್ರ ಕಛೇರಿಯ ಎಲ್ಲಾ ವಿಭಾಗಗಳ ಮ್ಯಾನೇಜರ್/ಅಧೀಕ್ಷಕರುಗಳಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.